ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಆರ್‌ಎಸ್‌ಎಸ್ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಅರುಣಾಚಲ ಪ್ರದೇಶದ ನಹರ್ಲಗುನ್‌ನ ಪಚಿನ್ ನದಿಯ ದಡದಲ್ಲಿರುವ ನೈಶಿ ಜನಜಾತಿಯ ಸ್ಥಳೀಯ ಪೂಜ್ಯ ಪ್ರಾರ್ಥನಾ ಕೇಂದ್ರವಾದ ದೋನಿ ಪೊಲೊ ನೈದರ್ ನಾಮ್ಲೊಗೆ ಭೇಟಿ ನೀಡಿದರು.

ಸಂಪುಟ : 46 ಸಂಚಿಕೆ : 22 ಫಾಲ್ಗುಣ–ಚೈತ್ರ ಕಲಿಯುಗಾಬ್ದ 5126 15–03–2025 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

## ರಾಷ್ಟ್ರದ್ರಷ್ಟಾರ ಡಾ॥ ಕೇಶವ್ ಬಲಿರಾಮ್ ಹೆಡಗೇವಾರ್



ಮುಂದಿನ ಯುಗಾದಿಯಂದು ಡಾ॥ ಹೆಡಗೇವಾರ್‌ರ 136ನೇ ಜಯಂತಿ.

ಭಾರತವನ್ನು ರತ್ನಗರ್ಭ ವಸುಂಧರಾ ಎಂದೂ ಕರೆಯಲಾಗುತ್ತದೆ. ಏಕೆಂದರೆ ಆಕೆಯ ಮಡಿಲನ್ನು ಶ್ರೀಮಂತಗೊಳಿಸಿದ ಅಸಂಖ್ಯಾತ ಮಹಾನ್ ಪುರುಷರು ಜನಿಸಿ ಈ ನಾಡಿನ ಏಳಿಗೆಗಾಗಿ ಶ್ರಮಿಸಿದ್ದಾರೆ. ಅಂತಹ ಮಹನೀಯರಲ್ಲಿ ಡಾ॥ ಕೇಶವ್ ಬಲಿರಾಮ್ ಹೆಡಗೇವಾರ್ ಪ್ರಮುಖರು. ರಾಷ್ಟ್ರ ದಾಸ್ಯದ ಕಗ್ಗತ್ತಲೆಯಲ್ಲಿದ್ದಾಗ ದಾಸ್ಯದ ಸಂಕೋಲೆಯನ್ನು ಬಿಡಿಸುವುದಕ್ಕಾಗಿ ಕ್ರಾಂತಿಕಾರಿಯಾಗಿ ಹೋರಾಡಿದರು. ಮುಂದೊಂದು ದಿನ ಖಂಡಿತವಾಗಿಯೂ ನಮ್ಮದಾಗುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕೆ ಸಂಘಟಿತ ಸಮಾಜವನ್ನು ನಿರ್ಮಿಸಬೇಕೆಂದು ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಪ್ರಾರಂಭಿಸಿ ಭಾರತೀಯರನ್ನು ಸಂಘಟಿಸಲು ತಮ್ಮ ಸಂಪೂರ್ಣ ಜೀವನವನ್ನೇ ಮುಡಿಪಾಗಿಟ್ಟ ರಾಷ್ಟ್ರದ್ರಷ್ಟ ಡಾ॥ ಕೇಶವ್ ಬಲಿರಾಮ್ ಹೆಡಗೇವಾರ್.

1889ರ ಎಪ್ರಿಲ್ 1 ಯುಗಾದಿಯ ಶುಭದಿನದಂದು ಜನಿಸಿದ ಡಾ॥ ಕೇಶವ್ ಬಲಿರಾಮ್ ಹೆಡಗೇವಾರರಿಗೆ ದೇಶಭಕ್ತಿ ರಕ್ತಗತವಾಗಿತ್ತು. ಬಾಲ್ಯದಲ್ಲೇ ವಿದೇಶಿ ರಾಣಿ ವಿಕ್ಟೋರಿಯ ಸಿಂಹಾಸನವೇರಿದ 60ನೇ ವರ್ಷದ ಸಂಭ್ರಮದ ಪ್ರಯುಕ್ತ ನೀಡಲಾಗಿದ್ದ ಸಿಹಿಯನ್ನು ತಿರಸ್ಕರಿಸಿ ತಮ್ಮ ಸ್ವಾಭಿಮಾನವನ್ನು ಮೆರೆದಿದ್ದರು. ಸೀತಾಬರ್ಡಿ ಕೋಟೆಯ ಮೇಲೆ ಹಾರಾಡುತ್ತಿದ್ದ ಬ್ರಿಟಿಷರ ಧ್ವಜ ಯೂನಿಯನ್ ಜಾಕ್ ಅನ್ನು ಕೆಳಗಿಳಿಸಲೇಬೇಕೆಂದು ನಿರ್ಧರಿಸಿ, ಸ್ನೇಹಿತರೊಡಗೂಡಿ ತಮ್ಮ ಗುರುವಿನ ಮನೆಯಿಂದ ಸೀತಾಬರ್ಡಿ ಕೋಟೆಗೆ ಸುರಂಗ ತೋಡುವ ಮೂಲಕ ದಾಸ್ಯದಿಂದ ಮುಕ್ತರಾಗಬೇಕು ಎಂಬ ಭಾವ ಬಾಲಕನಾಗಿರುವಾಗಲೇ ಅವರಲ್ಲಿ ಪ್ರಕಟವಾಗಿತ್ತು. ಯಾವ ವಂದೇ ಮಾತರಂ ಘೋಷಣೆಯನ್ನು ಕೇಳಿದರೆ ಬ್ರಿಟಿಷರು ಉರಿದುಬೀಳುತ್ತಿದ್ದರೋ, ಅಂತಹ ಘೋಷಣೆಯನ್ನು ತಮ್ಮ ಶಾಲೆಗೆ ಆಗಮಿಸಿದ್ದ ಬ್ರಿಟಿಷ್ ಅಧಿಕಾರಿಯ ಎದುರು ಗೆಳೆಯರನ್ನೆಲ್ಲಾ ಸೇರಿಸಿಕೊಂಡು ರಣಕಹಳೆಯಂತೆ ಮೊಳಗಿಸಿದವರು ಆಗಿನ್ನೂ ವಿದ್ಯಾರ್ಥಿಯಾಗಿದ್ದ ಕೇಶವ.

ಬಾಲ್ಯದಲ್ಲೇ ರಕ್ತಗತವಾಗಿದ್ದ ದೇಶಭಕ್ತಿಯ ಕಾರಣಕ್ಕಾಗಿ ಉನ್ನತ ವ್ಯಾಸಂಗವನ್ನು ನೆಪವನ್ನಾಗಿಟ್ಟುಕೊಂಡು ಅಂದಿನ ಕಾಲಕ್ಕೆ ಕ್ರಾಂತಿಕಾರಿಗಳ ನಾಡಾಗಿದ್ದ ಬಂಗಾಲಕ್ಕೆ ಬಂದರು. 1920ರ ದಶಕದಲ್ಲಿ ಯುಗಾಂತರ, ಅನುಶೀಲನ ಸಮಿತಿಯಂತಹ ಕ್ರಾಂತಿಕಾರಿ ಸಂಘಟನೆಗಳ ಭಾಗವಾಗಿದ್ದಲ್ಲದೇ ಮೊದಲ ದರ್ಜೆಯ ಕ್ರಾಂತಿಕಾರಿಯಾಗಿ ಗುರುತಿಸಿಕೊಂಡಿದ್ದರು. ಅವರು ಪಾಂಡುರಂಗ ಖಾನಖೋಜೇ, ಅರವಿಂದ ಘೋಷ್, ವಾರೀಂದ್ರ ಘೋಷ್, ತ್ರೈಲೋಕ್ಯನಾಥ ಚಕ್ರವರ್ತಿ ಮೊದಲಾದವರ ಸಹವರ್ತಿಗಳಾಗಿ ಕಾರ್ಯ ನಿರ್ವಹಿಸಿದ್ದವರು. ಕಲ್ಕತ್ತೆಯಲ್ಲಿ ವ್ಯಾಸಂಗ ಮುಗಿಸಿ ನಾಗಪುರಕ್ಕೆ ಬಂದ ಹೆಡಗೇವಾರ್ ನಾಗಪುರ ಮತ್ತು ಬಂಗಾಳ ನಡುವಿನ ಕ್ರಾಂತಿಕಾರ್ಯದ ಒಂದು ಬಹು ಮಹತ್ವದ ಕೊಂಡಿಯಾಗಿ ಕಾರ್ಯನಿರ್ವಹಿಸಿದ್ದರು. ನಂತರದ ದಿನಗಳಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿಯೂ ಕೆಲಸ ಮಾಡಿದ್ದರು. ನಾಗಪುರ ಪ್ರದೇಶ ಕಾಂಗ್ರೆಸ್ ಮುಖಂಡರಾಗಿಯೂ ಗುರುತಿಸಿಕೊಂಡಿದ್ದರು. ಅನೇಕ ಸತ್ಯಾಗ್ರಹಗಳಲ್ಲಿ ಭಾಗವಹಿಸಿದ ಕಾರಣ ಕಾರಾಗೃಹಶಿಕ್ಷೆಯನ್ನೂ ಅನುಭವಿಸಿದರು. ಆದರೆ ರಾಜಕೀಯದಲ್ಲಿದ್ದ ಅನೇಕ ಲೋಪಗಳನ್ನು ನೋಡಿದ ಹೆಡಗೇವಾರರಿಗೆ ಇದರಿಂದ ಸಮಾಜಪರಿವರ್ತನೆ ಅಸಾಧ್ಯ ಎನಿಸಿತು. ದೇಶನಿಷ್ಠರಾದ ಪ್ರಾಮಾಣಿಕವಾಗಿ ಕೆಲಸ ಮಾಡಬಲ್ಲ, ಸಮಾಜದಲ್ಲಿ ಜಾಗೃತಿ ಮೂಡಿಸುವ ಹಾಗೂ ಸಂಘಟನೆ ಮಾಡುವ ಧೈರ್ಯಶಾಲಿ ಕಾರ್ಯಕರ್ತರು ಇದ್ದರೆ ಮಾತ್ರ ಸ್ವಾತಂತ್ರ್ಯಪ್ರಾಪ್ತಿ ಸಾಧ್ಯ ಹಾಗೂ ಬಂದಂತಹ ಸ್ವಾತಂತ್ರ್ಯದ ರಕ್ಷಣೆ ಸಾಧ್ಯ ಎಂಬುದು ಅವರಿಗೆ ಮನವರಿಕೆಯಾಯಿತು. ಅಂತಹ ವ್ಯಕ್ತಿಗಳನ್ನು ತಯಾರು ಮಾಡಲು 1925ರ ಸೆಪ್ಟೆಂಬರ್ 27ರಂದು ವಿಜಯದಶಮಿಯ ಪರ್ವ ಕಾಲದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಪ್ರಾರಂಭಿಸಿದರು. ವ್ಯಕ್ತಿನಿರ್ಮಾಣದಿಂದ ಮಾತ್ರ ರಾಷ್ಟ್ರನಿರ್ಮಾಣ ಸಾಧ್ಯ ಎಂಬುದು ಅವರ ದೃಢ ನಂಬಿಕೆಯಾಗಿತ್ತು. ಆದ್ದರಿಂದ ವ್ಯಕ್ತಿನಿರ್ಮಾಣವೇ ಸಂಘದ ಪ್ರಮುಖ ಉದ್ದೇಶವಾಯಿತು. ವ್ಯಕ್ತಿ ಶಾಶ್ವತವಲ್ಲ, ತತ್ತ್ವ ಶಾಶ್ವತ ಎನ್ನುವುದನ್ನು ಅರಿತಿದ್ದ ಡಾ.ಹೆಡಗೇವಾರ್ ಅವರು ತ್ಯಾಗ, ಶೌರ್ಯದ ಸಂಕೇತವಾದ ಕೇಸರಿ ಬಣ್ಣದ 'ಭಗವಾ ಧ್ವಜ'ವನ್ನು ಸಂಘದ ಗುರುವಾಗಿ ಸ್ವೀಕರಿಸಿದರು.

ಇಡೀ ರಾಷ್ಟ್ರವನ್ನು ಸಂಘಟಿತಗೊಳಿಸಬೇಕು ಎಂಬ ಉದ್ದೇಶಕ್ಕಾಗಿ ನಾಗಪುರದ ಅವರ ಮನೆಯ ಮೊದಲನೇ ಮಹಡಿಯಲ್ಲಿ 15–20 ಮಂದಿ ನಿತ್ಯ ಸೇರುವುದರೊಂದಿಗೆ ಶುರುವಾದ ರಾಷ್ಟ್ರೀಯ ಸ್ವಯಂಸೇವಕ ಸಂಘ ನಿಧಾನವಾಗಿ ಸಂಘಟನೆಯ ರೂಪು ಪಡೆದು ವಿವಿಧ ಪ್ರಾಂತಗಳನ್ನು ತಲುಪಿತು. ಸಂಘದ ಕೆಲಸಕ್ಕಾಗಿ ತಮ್ಮ ಸರ್ವಸ್ವವನ್ನು ಮುಡಿಪಿಟ್ಟು ತಮ್ಮ ಕುಟುಂಬವನ್ನು ತೊರೆದು ಅನೇಕ ಮಂದಿ ಯುವಕರು 'ಪ್ರಚಾರಕ'ರಾಗಿ ಹೊರಟರು. 1940ರ ಹೊತ್ತಿಗೆ ಇಡೀ ರಾಷ್ಟ್ರದ ಎಲ್ಲಾ ಪ್ರಾಂತಗಳನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ತಲುಪಿತ್ತು. ಅದರ ಮೊದಲ ಸರಸಂಘಚಾಲಕರಾಗಿದ್ದ ಡಾ.ಹೆಡಗೇವಾರ್ ನಿರಂತರವಾಗಿ ದೇಶವ್ಯಾಪಿ ಪ್ರವಾಸಗಳಲ್ಲಿ ನಿರತರಾಗಿದ್ದರು. ಇದು ಅವರ ಆರೋಗ್ಯದ ಮೇಲೆ ಪರಿಣಾಮವನ್ನು ಬೀರಿತ್ತು. ಕೊನೆಯದಾಗಿ ಅವರು ಮೇ 16, 1940 ರಂದು ನಾಗಪುರದಲ್ಲಿ ಒಂದು ತಿಂಗಳ ಕಾಲ ನಡೆದ ಸಂಘ ಶಿಕ್ಷಾ ವರ್ಗದಲ್ಲಿ 3 ದಿನಗಳು ಮಾತ್ರ ಭಾಗವಹಿಸಿದ್ದರು. ಜೂನ್ 9 ರಂದು ಶಿಬಿರದಲ್ಲಿ ಪಾಲ್ಗೊಂಡು ಭಾರತದ ಉದ್ದಗಲದಿಂದ ಬಂದಿದ್ದ 1500 ಸ್ವಯಂಸೇವಕರನ್ನು ಸಂಬೋಧಿಸಿದರು. ಅವರು "ಆರ್‌ಎಸ್‌ಎಸ್ ಒಂದು ಹಿಂದೂ ರಕ್ಷಣಾ ದಳವೋ, ಅರೆಸೈನಿಕ ಪಡೆಯೋ ಅಲ್ಲ. ಆದರೆ ಇಡೀ ರಾಷ್ಟ್ರವನ್ನು ಮೌಲ್ಯಾಧಾರಿತ, ವೈಭವಯುತ, ಸರ್ವಾಂಗೀಣ ಉನ್ನತಿಯ ದಾರಿಯಲ್ಲಿ ಕೊಂಡುಹೋಗುವ ಮಹತ್ತರವಾದ ಜವಾಬ್ದಾರಿ ಎಲ್ಲಾ ಸ್ವಯಂಸೇವಕರ ಮೇಲೂ ಇದೆ" ಎಂದರು. ಇದೇ ಅವರ ಕಡೆಯ ಸಾರ್ವಜನಿಕ ಸಂಬೋಧನೆಯಾಗಿತ್ತು. ಹೆಡಗೇವಾರ್ ರವರು ಜೂನ್ 21, 1940ರಲ್ಲಿ ನಾಗಪುರದಲ್ಲಿ ನಿಧನರಾದರು.

1940ರಲ್ಲಿ ಡಾಕ್ಟರ್‌ಜೀ ನಿಧನರಾದಾಗ 'ಕೇಸರಿ' ಪತ್ರಿಕೆ ಹೀಗೆ ಬರೆಯಿತು. "ಸಾಮಾನ್ಯವಾಗಿ ನಾಯಕರಲ್ಲಿ ಕಾಣಿಸದಿರುವ ವಿನಯಶೀಲತೆಯು ಅವರಲ್ಲಿ ತುಂಬಿತ್ತು. ರಾಷ್ಟ್ರಸೇವೆಗಾಗಿ ತಮ್ಮ ಸ್ವಂತ ಪರಿವಾರ ಹಾಗೂ ತಮ್ಮ ಉಜ್ವಲ ಭವಿಷ್ಯವನ್ನೂ ತ್ಯಾಗ ಮಾಡಿದವರು ಅವರು. ಇನ್ನೊಂದು ಮರಾಠಿ ಪತ್ರಿಕೆ 'ಕಾಳ' ಹೀಗೆ ಬರೆಯಿತು, "ಭಾರತದ ಸ್ವಾತಂತ್ರಕ್ಕಾಗಿ ಅವರು ನಡೆಸಿದ ಅವಿರತ ಪ್ರಯತ್ನಕ್ಕೆ ಸರಿಸಾಟಿಯಾದುದು ಬೇರೊಂದಿಲ್ಲ." ■

### ಡಾ॥ ಕೇಶವ್ ಬಲಿರಾಮ್ ಹೆಡಗೇವಾರ್‌ರವರ ಪ್ರೇರಣಾದಾಯಿ ಮಾತುಗಳು

- ಕೇವಲ ಭೂಮಿಯ ಒಂದು ತುಂಡನ್ನು ರಾಷ್ಟ್ರ ಎಂದು ಕರೆಯಲು ಆಗುವುದಿಲ್ಲ. ಒಂದೇ ವಿಚಾರ, ಒಂದೇ ಆಚಾರ, ಒಂದೇ ಸಂಸ್ಕೃತಿ ಹಾಗೂ ಒಂದೇ ಪರಂಪರೆ ಇದ್ದು, ಪುರಾತನ ಕಾಲದಿಂದಲೂ ಒಂದು ಭೂಮಿಯಲ್ಲಿ ನೆಲೆಸಿ ಬಾಳಿರುವ ಜನರೇ ಒಂದು ರಾಷ್ಟ್ರವಾಗುತ್ತಾರೆ.
- ನಮ್ಮಲ್ಲಿ ಮೇಲುನೋಟಕ್ಕೆ ಮತಭೇದಗಳು ಎಷ್ಟೇ ಇರಬಹುದು. ಅಷ್ಟಾದರೂ ಹಿಂದುಗಳಾದ ನಾವೆಲ್ಲರೂ ಒಂದೇ ರಾಷ್ಟ್ರ. ಸಮಾನ ಆಚಾರ ವಿಚಾರ, ಸಮಾನ ಸಂಸ್ಕೃತಿ, ಸಮಾನ ಪರಂಪರೆ ಮತ್ತು ಸಮಾನ ಧ್ಯೇಯಗಳಿಂದ ಕೂಡಿದವರಲ್ಲಿಯೇ ನಿಜವಾದ ಒಗ್ಗಟ್ಟು ಸಾಧ್ಯ. ನಮ್ಮ ಸಂಘಟನೆಯ ಈ ಅಡಿಪಾಯ ಅತ್ಯಂತ ಶಾಸ್ತ್ರಶುದ್ಧವಾದುದು.
- ನಮ್ಮ ಸಮಾಜವನ್ನು ಪೀಡಿಸುತ್ತಿರುವ ಮೂಲ ರೋಗವನ್ನು ನಿವಾರಿಸಲು ನಮ್ಮ ಜನರ ರೋಮ ರೋಮಗಳಲ್ಲಿ ರಾಷ್ಟ್ರೀಯತೆಯನ್ನು ತುಂಬಬೇಕು. ಇಡೀ ಸಮಾಜವನ್ನು ಶಿಸ್ತುಬದ್ಧಗೊಳಿಸಬೇಕು. ಚೈತನ್ಯಶಾಲಿಯಾಗಿಸಬೇಕು. ತನ್ಮೂಲಕ ಅದಕ್ಕೆ ಶಾಶ್ವತವಾದ ವಿಜಯಶಾಲಿ ರಾಷ್ಟ್ರದ ಸ್ವರೂಪವನ್ನು ಮತ್ತೊಮ್ಮೆ ನಾವು ತಂದುಕೊಡಬೇಕು.
- ನಾವು ದುರ್ಬಲರಾಗಿ ಇರುವ ತನಕ ಸಹಜವಾಗಿಯೇ ಬಲಿಷ್ಠರಿಗೆ ನಮ್ಮ ಮೇಲೆ ಆಕ್ರಮಣ ಮಾಡುವ ಆಸೆಯಾಗುತ್ತದೆ. ನಾವು ಶಕ್ತಿವಂತರಾಗಿ ಇದ್ದಲ್ಲಿ, ನಮ್ಮ ಮೇಲೆ ಆಕ್ರಮಣ ಮಾಡುವ ಧೈರ್ಯವಾಗಲೀ, ನಮ್ಮನ್ನು ಅಪಮಾನಗೊಳಿಸುವ ಸಾಹಸವಾಗಲೀ ಯಾರಿಗೂ ಇರುತ್ತಿರಲಿಲ್ಲ.
- ತತ್ವ ಇರುವುದು ಪೊಳ್ಳು ಹರಟೆಗಾಗಿ ಅಲ್ಲ, ವ್ಯವಹಾರದಲ್ಲಿ ತರುವುದಕ್ಕಾಗಿ. ತತ್ವದ ಆಚರಣೆಯೇ ವ್ಯವಹಾರ. ತತ್ವಕ್ಕೆ ಹೊಂದುವ ಬಾಳ್ವೆಯೇ ಧ್ಯೆಯ ಪಥದಲ್ಲಿ ಮುಂದೆ ಸಾಗಲು, ಕೊನೆಯಲ್ಲಿ ಅಂತಿಮ ಗುರಿ ಸೇರಲು ಸಹ ನೆರವಾಗುವಂತಹದು.
- ನಮಗೆ ಶಕ್ತಿ ಗಳಿಸಬೇಕೆಂಬ ಆಸೆಯಿದೆ. ಅದನ್ನು ಗಳಿಸುವಂತಹ ಒಂದೇ ದಾರಿಯೂ ತಿಳಿದಿದೆ. ಆದರೆ, ಕೇವಲ ಆಸೆ ಮತ್ತು ತಿಳುವಳಿಕೆಗಳಿಂದ ಮಾತ್ರ ನಾವು ಬಲಶಾಲಿಗಳಾಗಲಾರೆವು. ಅದಕ್ಕಾಗಿ ನಿರಂತರ ಕೆಲಸ ಮಾಡುವ ಅಗತ್ಯವೂ ಇದೆ. ಸಂಘಟನೆಯ ತತ್ವವನ್ನು ನಾವು ಆಚರಣೆಯಲ್ಲಿ ತಂದಾಗ ಮಾತ್ರ ನಮ್ಮಲ್ಲಿ ಶಕ್ತಿ ಬೆಳೆಯಬಲ್ಲದು. ಶಕ್ತಿಯ ನಿರ್ಮಾಣವಾಗುವುದು ಮಾತುಗಳಿಂದಲ್ಲ, ಕೃತಿಯಿಂದ.
- ನಮ್ಮ ಪವಿತ್ರವಾದ ಹಿಂದು ಧರ್ಮ, ಹಿಂದು ಸಂಸ್ಕೃತಿಗಳು ಜಗತ್ತಿನಲ್ಲಿ ಗೌರವದಿಂದ ಚಿರಕಾಲ ಬಾಳಬೇಕೆಂಬುದೇ ನಮ್ಮ ಆಸೆ. ಆದರೆ, ನಮ್ಮ ಧರ್ಮ ಸಂಸ್ಕೃತಿಗಳು ಎಷ್ಟೇ ಶ್ರೇಷ್ಠವಾಗಿದ್ದರೂ, ಅವುಗಳನ್ನು ರಕ್ಷಿಸುವಷ್ಟು ಶಕ್ತಿ ನಮ್ಮ ಬಳಿ ಇಲ್ಲದಿದ್ದಲ್ಲಿ ಜಗತ್ತು ಅವುಗಳನ್ನು ಗೌರವಿಸುವುದಿಲ್ಲ.
- ನಮ್ಮ ಮನಸ್ಸಿನ ದುರ್ಬಲತೆಯೇ ಎಲ್ಲಕ್ಕೂ ಹೆಚ್ಚು ಅಪಾಯಕಾರಿ. ಅದೇ ಎಲ್ಲಕ್ಕಿಂತ ದೊಡ್ಡ ದೋಷ. ನಮ್ಮ ಸಾಮರ್ಥ್ಯವನ್ನರಿತು, ಎಚ್ಚರಗೊಂಡು ನಾವು ಸಂಘಟಿತರಾದಾಗ ನಮ್ಮ ಶಕ್ತಿಯು ವಿರಾಟರೂಪ ತಾಳಬಲ್ಲದು. ಆಗ ಯಾವುದೇ ಕೆಲಸವೂ ನಮಗೆ ಅಸಾಧ್ಯ ಎನಿಸದು.
- ಮನುಷ್ಯನು ತನ್ನದೊಂದು ಚಿಕ್ಕ ಕುಟುಂಬವನ್ನು ಸಹ ಪ್ರಯತ್ನವಿಲ್ಲದೆ ನಿಭಾಯಿಸಲಾರನು. ಹಾಗಿದ್ದ ಮೇಲೆ ರಾಷ್ಟ್ರದ ವಿಶಾಲ ಜೀವನಕ್ರಮವು ನಮ್ಮ ಪ್ರಯತ್ನಗಳಿಲ್ಲದೆಯೇ, ತನ್ನಷ್ಟಕ್ಕೆ ಚಿರಂತನವಾಗಿ ನಡೆಯುತ್ತಾ ಹೋಗುವುದೆಂದು ಅಪೇಕ್ಷಿಸುವುದು ಮೂರ್ಖತನ, ವಿಶೇಷ ಪುರುಷಾರ್ಥವಿಲ್ಲದೆ ಹಿಂದು ರಾಷ್ಟ್ರವನ್ನು ಅಮರಗೊಳಿಸುವುದು ಅಶಕ್ಯ.
- ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿಯೂ ಯಾರು ಕೆಲಸ ಮಾಡುತ್ತಾರೋ, ಅಂತಹವರೇ ಕೊನೆಯಲ್ಲಿ ಗೆಲ್ಲುತ್ತಾರೆ. ಅಂತಹವರ ಹೆಸರೇ ಜಗತ್ತಿನಲ್ಲಿ ಶಾಶ್ವತವಾಗಿ ಉಳಿಯುವುದು.
- ಕೇವಲ ಸದಾಶಯ ಇದ್ದ ಮಾತ್ರಕ್ಕೆ ಯಾವುದೇ ಕೆಲಸವಾಗದು. ಪ್ರತ್ಯಕ್ಷ ಪರಮಾತ್ಮನು ಸಹ ಹತ್ತು ಅವತಾರಗಳನ್ನು ಎತ್ತಿ ಮನುಷ್ಯಶಕ್ತಿಯ ಮೂಲಕವೇ ತನ್ನ ಕಾರ್ಯವನ್ನು ಸಾಧಿಸಬೇಕಾಯಿತು.


## ಸಂಸ್ಮರಣೆ

## ಶ್ಯಾಮಜೀ ಕೃಷ್ಣವರ್ಮ (1 ಅಕ್ಟೋಬರ್ 1857 - 30 ಮಾರ್ಚ್ 1930)

ವಿದೇಶಿ ನೆಲದಲ್ಲಿ ನಿಂತು ಸ್ವದೇಶದ ಕ್ರಾಂತಿಕಾರಿಗಳಿಗೆ ಆಸರೆಯಾಗಿ, ಸ್ವಾತಂತ್ರ್ಯ ಸಮರದಲ್ಲಿ ಕೊಡುಗೆ ಕೊಟ್ಟವರು ಪಂಡಿತ್ ಶ್ಯಾಮಜೀ ಕೃಷ್ಣ ವರ್ಮ. ಸೀಸಿಕ್‌ನೆಸ್ (Seasickness)ಗೆ ಹೆದರದೆ, ಸಾಗರಗಳನ್ನು ದಾಟಿ; ತಮ್ಮ ವಸಾಹತುಗಳ ಹವೆಗೆ ಒಗ್ಗಿಸಿಕೊಂಡು; ಲಂಡನ್ನಿನ ಅಭಿವೃದ್ಧಿಗಾಗಿ ತಾಯಿ ಭಾರತಿಯ ಸಂಪತ್ತನ್ನು ಲೂಟಿಗೈಯುವವರನ್ನು ಸದೆಬಡೆಯುವ ಕ್ರಾಂತಿಕಾರಿಗಳಿಗೆ ಆಸರೆ ನೀಡಿದ ಶ್ಯಾಮಜೀ ಕೃಷ್ಣ ವರ್ಮ ಭಾರತದಲ್ಲಿ ಹಲವು ಸಂಸ್ಥಾನಗಳಿಗೆ ದಿವಾನರಾಗಿ ದುಡಿದಿದ್ದರು. ಕೆಲಕಾಲ ದಿವಾನರಾಗಿ ದುಡಿದ ಬಳಿಕ ಸಂಸಾರ ಸಮೇತ ಲಂಡನ್ನಿಗೆ ಬಂದು ನೆಲೆಸಿದ ಶ್ಯಾಮಜೀ ಅಲ್ಲಿ ಪ್ರತಿಷ್ಠಿತ ಇನ್ನರ್ ಟೆಂಪಲ್ ವಕೀಲರಾಗುತ್ತಾರೆ.

ವಿದೇಶಿ ನೆಲದಲ್ಲಿ ಬಂದು ನೆಲೆಸಿದರೂ, ಸ್ವದೇಶಿ ನೆಲದ ಸ್ಥಿತಿಗತಿಗಳನ್ನು ತಿಳಿಯುವಾಗ ಶ್ಯಾಮಜೀ ಅವರ ಮುಖದಲ್ಲಿ ನೋವಿನ ಗೆರೆಗಳು ಕಾಣಿಸಿಕೊಳ್ಳುತ್ತಿದ್ದವು. ಬ್ರಿಟಿಷರ ವಿರುದ್ಧ ಸೆಟೆದು ನಿಂತು ದೇಶಭ್ರಷ್ಟರೆಂದು ಕರೆಸಿಕೊಳ್ಳುತ್ತಿದ್ದ ದೇಶಭಕ್ತರನ್ನು ಒಗ್ಗೂಡಿಸಲು ಅವರು ಪ್ರಾರಂಭಿಸಿದುದು ಭಾರತ ಭವನ (India House) ವನ್ನು. ಅಲ್ಲಿ ರಾಷ್ಟ್ರೀಯತೆ ಸಂಬಂಧಿಸಿದ ಪುಸ್ತಕಗಳಿರುವ ಗ್ರಂಥಾಲಯ ಮತ್ತು ಯುವಕರ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಲು ವ್ಯಾಯಾಮ ಶಾಲೆಯ ವ್ಯವಸ್ಥೆಯೂ ಆಗುತ್ತದೆ. ದೇಶಕ್ಕಾಗಿ ಬದುಕು ಮೀಸಲಿಟ್ಟ ರಾಷ್ಟ್ರೀಯವಾದಿ ಯುವಕರಿಗಾಗಿ ಶಿವಾಜಿಯ ಹೆಸರಿನಲ್ಲಿ ಶಿಷ್ಯವೇತನವನ್ನೂ ಪ್ರಾರಂಭಿಸಿದ ಶ್ಯಾಮಜೀ ವೀರ ಸಾವರ್ಕರ್, ಮೇಡಂ ಕಾಮಾ, ಲಾಲಾ ಹರ್ ದಯಾಳ್ ಅಂತಹ ಕ್ರಾಂತಿಕಾರಿಗಳ ಕೆಲಸಗಳಿಗೆ ಬೆನ್ನೆಲುಬಾಗಿ ನಿಲ್ಲುತ್ತಾರೆ.

1909ರಲ್ಲಿ ಮದನ್ ಲಾಲ್ ಧಿಂಗ್ರಾ ಕರ್ಜನ್ ವಾಯಿಲಿ ಎಂಬ ಬ್ರಿಟಿಷ್ ರಕ್ಕಸನ ಸಂಹಾರ ಮಾಡಿದ ಮೇಲೆ ಭಾರತಭವನ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗುತ್ತದೆ. ಕ್ರಾಂತಿಯ ಜ್ವಾಲೆಗೆ ತುಪ್ಪ ಸುರಿಯುವ ಇಂಡಿಯನ್ ಸೋಷಿಯಾಲಜಿಸ್ಟ್ ಪತ್ರಿಕೆ ಮೇಲೆ ಬ್ರಿಟಿಷರು ನಿಷೇಧ ಹೇರುತ್ತಾರೆ, ಜೊತೆಗೆ ಭಾರತಭವನದ ಮೇಲೆ ದಾಳಿ ನಡೆಸಲು ಪ್ರಯತ್ನಿಸುತ್ತಾರೆ. ಭಾರತ ಭವನದಲ್ಲಿದ್ದ ಪ್ರತಿಯೊಬ್ಬ ಭಾರತೀಯನಲ್ಲೂ ರಾಷ್ಟ್ರೀಯ ಪ್ರಜ್ಞೆ ಜಾಗೃತವಾಗಿದೆ ಎಂದರಿತ ಶ್ಯಾಮಜೀ ಕೃಷ್ಣ ವರ್ಮ, ಭಾರತಭವನವನ್ನು ಮಾರಿ



ಬಿಡುತ್ತಾರೆ. ಭಾರತ ಭವನದಿಂದ ಹೊರ ಬಂದ ದೇಶಭಕ್ತರ ಅಂತಃಶಕ್ತಿಯೇ ಬಲಗೊಂಡಿರುವಾಗ, ಆ ಕಟ್ಟಡ ಇಲ್ಲದಾದರೂ ಕ್ರಾಂತಿಕಾರಿ ಚಟುವಟಿಕೆಗಳಿಗೆ ಕಡಿವಾಣ ಹಾಕಲಾಗದು ಎಂಬ ವಾಸ್ತವದ ಅರಿವಾದಾಗ ಶ್ಯಾಮಜೀ ಪೋಲೀಸರಿಂದ ಬಂಧಿಸಲ್ಪಡುವ ಮೊದಲೇ ಪ್ಯಾರಿಸ್ ತಲುಪಿ, ಅಲ್ಲಿಂದ ಸ್ವಿಟ್ಜರ್ಲ್ಯಾಂಡನ್ನು ಸೇರುತ್ತಾರೆ.

ಜೀವನದ ಕೊನೆಯ ದಿನಗಳಲ್ಲಿ ಕೊನೆಯ ಆಸೆ ಏನೆಂದು ಅವರು ಸೈಂಟ್ ಜಾರ್ಜ್ ಸ್ಮಶಾನದ ಅಧಿಕಾರಿಗಳ ಬಳಿ ತೋಡಿಕೊಳ್ಳುತ್ತಾರೆ. ತಾವು ಸತ್ತ ಕೂಡಲೇ ತಮ್ಮ ಚಿತಾಭಸ್ಮವನ್ನು ಭಾರತಕ್ಕೆ ಕಳುಹಿಸಕೂಡದು, ಬದಲಾಗಿ ಸ್ವಾತಂತ್ರ್ಯ ಸಿಕ್ಕಾಗ ಚಿತಾಭಸ್ಮವನ್ನು ಸ್ವದೇಶಕ್ಕೆ ಕಳುಹಿಸಿಕೊಡಬೇಕೆಂಬುದು ಅವರ ಇಚ್ಛೆಯಾಗಿತ್ತು. ಬದುಕಿನ ಅವಧಿಯಲ್ಲಿ ಸ್ವದೇಶ ಸ್ವತಂತ್ರವಾಗದಿದ್ದರೂ, ದೇಶದ ಸ್ವಾತಂತ್ರ್ಯ ಮತ್ತು ಪರಮಾಧಿಕಾರಕ್ಕೆ ತಮ್ಮ ಚಿತಾಭಸ್ಮ ಸಾಕ್ಷಿಯಾಗಬೇಕೆಂಬ ಅವರ ಆಸೆ ಈಡೇರಿದ್ದು 2003ರಲ್ಲಿ ಅಂದರೆ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು 56 ವರ್ಷಗಳಾದ ಬಳಿಕ. ಆ ಪುಣ್ಯ ಕಾರ್ಯವನ್ನು ಮಾಡಿದ ವ್ಯಕ್ತಿ ಇನ್ನಾರೂ ಅಲ್ಲ, ನಮ್ಮ ದೇಶದ ಇಂದಿನ ಪ್ರಧಾನಿ!


ಶ್ಯಾಮಜೀ ಕೃಷ್ಣ ವರ್ಮ ಅವರು ದೇಶಕ್ಕೆ ಕೊಟ್ಟ ಕೊಡುಗೆಯನ್ನು ಸ್ಮರಿಸಿ 2010ರಲ್ಲಿ ಅವರ ಜನ್ಮಸ್ಥಳದಲ್ಲಿ ಕ್ರಾಂತಿತೀರ್ಥ ವರ್ಮ ಸ್ಮಾರಕವನ್ನು ಸ್ಥಾಪಿಸಲಾಯಿತು. 1909ರಲ್ಲಿ ಬ್ರಿಟಿಷರು ರದ್ದು ಮಾಡಿದ್ದ ಶ್ಯಾಮಜೀ ಅವರ ವಕೀಲಿಕೆ ಪರವಾನಗಿಯನ್ನು 2015ರಲ್ಲಿ ಪುನಃ ಸ್ಥಾಪಿಸಲಾಯಿತು.

ದೇಶದ ಹಿತಕ್ಕಾಗಿ ಶ್ರಮಿಸಿದ ಶ್ಯಾಮಜೀ ಕೃಷ್ಣ ವರ್ಮ ಅವರು ಇಹ ತ್ಯಜಿಸಿ, ಇಂದಿಗೆ 95 ವರ್ಷಗಳೇ ಕಳೆದು ಹೋದವು. ಆಗೊಮ್ಮೆ, ಈಗೊಮ್ಮೆ ಸ್ವಾತಂತ್ರ್ಯ ವೀರ ಸಾವರ್ಕರರಂತಹ ಕ್ರಾಂತಿಕಾರಿ ಪುಟಗಳನ್ನು ತಿರುವಿ ಹಾಕಿದಾಗ ಶ್ಯಾಮಜೀ ಎಂಬ ರಾಷ್ಟ್ರವಾದಿ ನೆನಪಾಗುತ್ತಾರೆ.

## ಮಕ್ಕಳಿಗಾಗಿ ರಾಣಿ ಅಹಲ್ಯಾಬಾಯಿ ಹೋಳ್ಕರ್ ಕಥೆಗಳು

ಪುಸ್ತಕ ಪರಿಚಯ

**ಲೇಖಕರು:** ಅಚಲಾ ಬಾಪಟ್
**ಪ್ರಕಾಶನ:** ಅಯೋಧ್ಯಾ ಪಬ್ಲಿಕೇಶನ್
**ಬೆಲೆ:** ರೂ.120




ಇತಿಹಾಸದ ಪುಟಗಳನ್ನು ತಿರುವಿ ನೋಡಿದರೆ ಅಲ್ಲಿ ನಮ್ಮನ್ನು ಬೆರಗುಗೊಳಿಸುವ ಅನೇಕ ಪಾತ್ರಗಳು ಕಾಣಸಿಗುತ್ತವೆ. ಅಂಥವರಲ್ಲಿ ರಾಣಿ ಅಹಲ್ಯಾಬಾಯಿ ಹೋಳ್ಕರ್ ಕೂಡ ಒಬ್ಬರು. ಒಂದೆಡೆ ಸಂಸಾರದ ಜವಾಬ್ದಾರಿಗಳನ್ನು ಸಂಭಾಳಿಸುತ್ತ, ಇನ್ನೊಂದೆಡೆ ತನ್ನನ್ನೇ ನಂಬಿದ ಜನತೆ ಹಾಗೂ ಸಮಾಜದ ಒಳಿತಿಗಾಗಿ ಶ್ರಮಿಸಿದ ಅಹಲ್ಯಾ ಬಾಯಿಯ ಜೀವನವೇ ಅನನ್ಯವಾಗಿದೆ. ಯುದ್ಧಭೂಮಿಯಲ್ಲಿ ವೀರ ನಾರಿಯಾಗಿ, ತನ್ನ ಜವಾಬ್ದಾರಿಗಳನ್ನು ನಿರ್ವಹಿಸುವ ವಿಚಾರದಲ್ಲಿ ಕರ್ಮಯೋಗಿನಿಯಾಗಿ, ಪ್ರಜೆಗಳ ಒಳಿತಿಗಾಗಿ ಶ್ರಮಿಸಿದ ಮಾತೋಶ್ರೀ ಯಾಗಿ ಅವರು ಅನೇಕ ಸಂಘರ್ಷಗಳನ್ನು ಯಶಸ್ವಿಯಾಗಿ ಎದುರಿಸಿದ್ದಾರೆ. ಇಂತಹ ಬಹುಮುಖ ವ್ಯಕ್ತಿತ್ವದ ಅಹಲ್ಯಾ ಬಾಯಿಯ ಜೀವನದ ಕಥೆಗಳು ಮಕ್ಕಳಿಗೆ ಖಂಡಿತ ಸ್ಫೂರ್ತಿ ನೀಡುತ್ತವೆ.

ಪುಸ್ತಕಕ್ಕಾಗಿ ಸಂಪರ್ಕಿಸಿ: 7795827307

## ಮೋಟರ್ ಸೈಕಲ್‌ನಲ್ಲಿ ಇಬ್ಬರಿಗಿಂತ ಹೆಚ್ಚು ಮಂದಿ ಪ್ರಯಾಣಿಸಬೇಡಿ

ನಾಗರಿಕ ಶಿಷ್ಟಾಚಾರ

ಮೋಟರ್ ಸೈಕಲ್‌ನಲ್ಲಿ ಪ್ರಯಾಣ ಮಾಡುವವರು ಇಬ್ಬರಿಗಿಂತ ಹೆಚ್ಚು ಮಂದಿ ಪ್ರಯಾಣಿಸುವುದು ಸಾಮಾನ್ಯವಾಗಿಬಿಟ್ಟಿದೆ. ಆದರೆ ಇದು ಕಾನೂನು ಬಾಹಿರ. ಅವಶ್ಯಕತೆಗಿಂತ ಹೆಚ್ಚು ಮೋಜುಮಸ್ತಿಯ ಕಾರಣಕ್ಕಾಗಿಯೇ ದ್ವಿಚಕ್ರವಾಹನದಲ್ಲಿ ಮೂರು ಮಂದಿ ಪ್ರಯಾಣಿಸುವುದನ್ನು ಕಾಣಬಹುದು. ಅದರಲ್ಲೂ ಕೆಲವು ಯುವಕರು ಮೂರು ಮಂದಿ ದ್ವಿಚಕ್ರವಾಹನದಲ್ಲಿ ಪ್ರಯಾಣ ಮಾಡುವಾಗ ಇತರ ಸವಾರರಿಗೆ ತೊಂದರೆಯಾಗುವಂತೆ ವಾಹನ ಚಾಲನೆ ಮಾಡುವುದು, ವೀಲಿಂಗ್ ಮಾಡುವುದು, ಸುಖಾಸುಮ್ಮನೇ ದ್ವಿಚಕ್ರ ವಾಹನಗಳ ಗುಂಪು ಕಟ್ಟಿ ಅಸಭ್ಯ ಶಬ್ದಗಳನ್ನು ಕೂಗಿಕೊಂಡು ಹೋಗುವುದು, ಅಸಭ್ಯ ವರ್ತನೆ ತೋರುವುದನ್ನು ಮಾಡುತ್ತಾರೆ. ಮೊದಲನೆಯದಾಗಿ ದ್ವಿಚಕ್ರವಾಹನದಲ್ಲಿ ಮೂರು ಮಂದಿ ಸಂಚರಿಸುವುದು ಸುರಕ್ಷಿತವಲ್ಲ. ಯಾವ ಸಂದರ್ಭದಲ್ಲಾದರೂ ನಮ್ಮ ಪ್ರಾಣಕ್ಕೆ ಕುತ್ತು ಬರಬಹುದು. ಅದರಲ್ಲೂ ಇಂತಹ ದುರ್ವರ್ತನೆಗಳನ್ನು ತೋರುವುದು ಸಹ್ಯವಲ್ಲ.



## ಶಿವೇ ಗ್ರಾಮದ ಚಿತ್ರಣವನ್ನು ಬದಲಿಸಿದ ವೀರ ಸಾವರ್ಕರ್ ಮಂಡಲ

ಮಣ್ಣಿನ ಪಾತ್ರೆಗಳನ್ನು ತಯಾರಿಸಿ ಪಟ್ಟಣದಲ್ಲಿ ಮಾರಾಟ ಮಾಡಿ ಬದುಕು ಸಾಗಿಸಲು ಕಷ್ಟವಾದಾಗ ಬಬನ್ ದಗಡೂ ಎಂಬ ಬಡ ಹುಡುಗ ತನ್ನ ಹಳ್ಳಿಗೆ ಹಿಂತಿರುಗಿ ತನ್ನ ಪುಟ್ಟ ಜಮೀನಿನಲ್ಲಿ ಉಳುಮೆ ಆರಂಭಿಸಿದ. ಆದರೆ ದುರ್ವಿಧಿ!! ಐದು ತಿಂಗಳ ಸತತ ಪರಿಶ್ರಮದಿಂದ ಕೈಸೇರಿದ 40 ಕ್ವಿಂಟಲ್ ಫಸಲು ದುರದೃಷ್ಟವಶಾತ್ ಬೆಂಕಿಗೆ ಆಹುತಿಯಾಯಿತು. ಆ ಸಮಯದಲ್ಲಿ ಅವನ ನೆರವಿಗೆ ಬಂದವರು ಆ ಹಳ್ಳಿಯ ವೀರ ಸಾವರ್ಕರ್ ಮಂಡಲದ ಯುವಕರು!!

ಈ ಸ್ವಯಂಸೇವಕರು ಅಸಹಾಯಕನಾಗಿದ್ದ ಬಬನ್ ದಗಡೂಗೆ ಹಳ್ಳಿಯವರಿಂದ 25 ಕ್ವಿಂಟಲ್ ದವಸಧಾನ್ಯ ಹಾಗೂ 20,000 ರೂಪಾಯಿಗಳನ್ನು ಸಂಗ್ರಹಿಸಿ ಸಹಾಯ ಮಾಡಿದರು. ಪುಣೆಯ ಖೇಡ್ ತಾಲೂಕಿನ ಸಣ್ಣ ಹಳ್ಳಿಯಾದ "ಶಿವೆ" ಯಲ್ಲಿ ಸಂಘದ ಸ್ವಯಂಸೇವಕರ ಮಂಡಲಿಯು ಕಷ್ಟದ ಪರಿಸ್ಥಿತಿಯಲ್ಲಿ ಈ ಬಡ ರೈತನಿಗೆ ಬೆಂಬಲವಾಗಿ ನಿಂತು ಆತನಿಗೆ ಆಸರೆಯಾಗಿದೆ. ಇದೇ ಯುವಕರ ತಂಡ ಶಂಕರ ತುಲಸೀರಾಮ ಸಾತ್ಪುತೆ ಅವರ ಮನೆಯು ಸುಟ್ಟು ಕರಕಲಾದಾಗ 1,75,000/– ರೂಪಾಯಿಗಳನ್ನು ಸಂಗ್ರಹಿಸಿ ಇವರಿಗೆ ಪುಟ್ಟದಾದ ಮನೆಯನ್ನು ನಿರ್ಮಿಸಿಕೊಟ್ಟಿತ್ತು.

ಹೀಗೆ ಅದೇ ಗ್ರಾಮದಲ್ಲಿರುವ ರಾಮಚಂದ್ರ ಗಹದೇ ಸ್ಮೃತಿವಾಚನಾಲಯ ಇರಬಹುದು, ಅದೇ ಕಟ್ಟಡದಲ್ಲಿ ಸುವ್ಯವಸ್ಥಿತವಾಗಿ ನಡೆಯುತ್ತಿರುವ ನಿಃಶುಲ್ಕ ಕಂಪ್ಯೂಟರ್ ತರಗತಿಗಳ ಜೊತೆಗೆ ಗ್ರಾಮ ವಿಕಾಸ ಸಮಿತಿ ಮತ್ತು ಸಾವರ್ಕರ್ ಮಂಡಲದ ವತಿಯಿಂದ ಗ್ರಾಮದಲ್ಲಿ ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ, ಈ ಎಲ್ಲ




ಕ್ಷೇತ್ರಗಳಲ್ಲೂ ಮನಸ್ಸು ವಿಕಾಸ ಹೊಂದುವ, ಸರಿಯಾದ ಮಾರ್ಗದರ್ಶನವನ್ನು ನೀಡುವ ಕಾರ್ಯಗಳು ನಡೆಯುತ್ತಿವೆ.

ಸೇವಾಗಾಥಾ

ರಾಷ್ಟ್ರೀಯ ಸ್ವಯಂಸೇವಕ ಸಂಘದ "ರಾಷ್ಟ್ರ ಜಾಗರಣ" ಅಭಿಯಾನದ ಮುಖಾಂತರ 2000ನೇ ಇಸವಿಯಲ್ಲಿ ಮೊದಲ ಬಾರಿಗೆ ಸಂಘದ ಸ್ವಯಂಸೇವಕರು "ಶಿವೆ" ಗ್ರಾಮವನ್ನು ತಲುಪಿದರು. ಅಂದಿನ ಪ್ರಾಂತ ಗ್ರಾಮವಿಕಾಸ ಪ್ರಮುಖರಾಗಿದ್ದ ರಮೇಶ ಕೋಬಲ್ ಮತ್ತು ಅವರ ಸಂಗಡಿಗರ ಪರಿಶ್ರಮದಿಂದ ಇಲ್ಲಿ ಒಂದು ಸಾಪ್ತಾಹಿಕ ಶಾಖೆಯು ಆರಂಭವಾಯಿತು. ಶಾಖೆಯಲ್ಲಿ ತಯಾರಾದ ಸ್ವಯಂಸೇವಕರ ಪರಿಶ್ರಮದಿಂದ ಗ್ರಾಮದಲ್ಲಿ ಪರಿವರ್ತನೆಯ ಗಾಳಿ ಬೀಸಲಾರಂಭಿಸಿತು ಎಂದು ಸಾವರ್ಕರ್ ಮಂಡಲದ ಸಂಸ್ಥಾಪಕ ಶ್ರೀ ರೋಹಿದಾಸ್ ಗಡದೇ ಹೇಳುತ್ತಾರೆ.

18 ವರ್ಷಗಳಿಂದ ನಡೆಯುತ್ತಿರುವ ಐದು ದಿನಗಳ ಉಪನ್ಯಾಸ ಮಾಲಿಕೆ ಕಾರ್ಯಕ್ರಮದಿಂದ ಗ್ರಾಮದ ಜನರಲ್ಲಿ ರಾಷ್ಟ್ರಭಾವದ ಜಾಗೃತಿ ಬೆಳೆಯತೊಡಗಿದೆ. ಈ ಗ್ರಾಮದ ಬಡ ಕುಟುಂಬದ ಕನ್ಯೆಯರ ವಿವಾಹವು, ಮಂಡಲದ ವತಿಯಿಂದ ಪ್ರತಿ ವರ್ಷವೂ "ಸಾಮೂಹಿಕ ವಿವಾಹ" ಕಾರ್ಯಕ್ರಮದಲ್ಲಿ ಕಿಂಚಿತ್ತೂ ಖರ್ಚಿಲ್ಲದೆ ಜರಗುತ್ತಿವೆ. ಈವರೆಗೆ ಈ ಕಾರ್ಯಕ್ರಮದ ಮೂಲಕ ಬಡ ಕುಟುಂಬದ 400ಕ್ಕೂ ಹೆಚ್ಚಿನ ಹೆಣ್ಣು ಮಕ್ಕಳ ವಿವಾಹವನ್ನು ನೆರವೇರಿಸುವುದರಲ್ಲಿ ಯಶಸ್ವಿಯಾಗಿದೆ.

ಶಿವೆ ಗ್ರಾಮದಲ್ಲಿ ಈಗ ಜನರಿಗೆ ಸಣ್ಣ ಪುಟ್ಟ ಅವಶ್ಯಕತೆಗಳಿಗೆ ದೊಡ್ಡವರ ಮುಂದೆ ಕೈ ಚಾಚುವ ಪ್ರಮೇಯವಿಲ್ಲ. ರಮೇಶ ಕೋಬಲ್ ಅವರ ಪ್ರಕಾರ ಈ ಗ್ರಾಮದಲ್ಲಿ ಪುರುಷರ ಮತ್ತು ಮಹಿಳೆಯರ ಪ್ರತ್ಯೇಕ ಸ್ವಸಹಾಯ ಸಂಘಗಳು ಸುಸೂತ್ರವಾಗಿ ನಡೆಯುತ್ತಿವೆ. ಅಗತ್ಯವಿದ್ದ ಸಮಯದಲ್ಲಿ 1% ಬಡ್ಡಿಯ ಶರತ್ತಿನ ಮೇಲೆ ಹಣ ಸಿಗಬಹುದಾಗಿದೆ. ಗ್ರಾಮದ ಮಕ್ಕಳು ನಗರದ ಮಕ್ಕಳ ರೀತಿಯಲ್ಲೇ ಶಿಕ್ಷಣ ಪಡೆಯಲಿ ಎಂಬ ಉದ್ದೇಶದಿಂದ ಶ್ರೀ ರಾಮಗೀರ್ ಬಾಬಾ ಶಿಕ್ಷಣ ಸಂಸ್ಥೆಯ ವತಿಯಿಂದ ಇಲ್ಲಿ ಜ್ಞಾನದೀಪ ವಿದ್ಯಾಲಯ ನಡೆಯುತ್ತಿದೆ. ಈ ವಿದ್ಯಾಲಯವು ವ್ಯವಸ್ಥಿತವಾದ ರೀತಿಯಲ್ಲಿ ಸಾಗುವಲ್ಲಿ ವೀರ ಸಾವರ್ಕರ್ ಮಂಡಲವು ಮುಖ್ಯ ಪಾತ್ರವನ್ನು ವಹಿಸುತ್ತಿದೆ.

ಈ ಗ್ರಾಮದ ಮಕ್ಕಳು ಸರ್ಕಾರಿ ನೌಕರಿಗಳನ್ನು ಪಡೆಯಲಿ ಎಂಬ ಉದ್ದೇಶದಿಂದ ರಾಮಚಂದ್ರ ಗಹದೇ ಸ್ಮೃತಿ ವಾಚನಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿಯ ತರಬೇತಿಗಳು ನಡೆಯುತ್ತಿವೆ. ಇದೇ ಕಟ್ಟಡದಲ್ಲಿ ನಡೆಯುತ್ತಿರುವ ಕಂಪ್ಯೂಟರ್ ಕೇಂದ್ರದ ವಿಶೇಷತೆಯೆಂದರೆ, ಗ್ರಾಮದ ಸರ್ಕಾರಿ ಶಾಲೆಯ ಮಕ್ಕಳೂ ಸಹ ಇಲ್ಲಿ ಕಂಪ್ಯೂಟರ್ ಕಲಿಯಲು ಬರುತ್ತಾರೆ. ವಾಚನಾಲಯದಲ್ಲಿ ಲಭ್ಯವಿರುವ 15,000ಕ್ಕೂ ಅಧಿಕ ಪುಸ್ತಕ ಭಂಡಾರವು ನಿಜವಾದ ಅರ್ಥದಲ್ಲಿ ಎಂದಿಗೂ ಖಾಲಿಯಾಗದ ಜ್ಞಾನಭಂಡಾರವಾಗಿದೆ.

ಸಂಪರ್ಕ: ರೋಹಿದಾಸ್ ಗಡದೇ – 9850667265

ಸಂಪಾದಕೀಯ ಸಹಕಾರ: ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ರೂಪಶ್ರೀ ನಾಗರಾಜ್, ಸುಲಕ್ಷಣಾ ಶರ್ಮಾ, ಪ್ರಣವ ಭಟ್

## ಟಾಟಾದಿಂದ ಭಾರತದ ಮೊದಲ ಹೈಡ್ರೋಜನ್ ಟ್ರಕ್

2070ರ ವೇಳೆಗೆ ಇಂಗಾಲ ಶೂನ್ಯತೆ ಸ್ಥಾಪಿಸುವ ಗುರಿಯೊಂದಿಗೆ ಟಾಟಾ ಮೋಟಾರ್ಸ್ ದೇಶದ ಮೊಟ್ಟ ಮೊದಲ ಹೈಡ್ರೋಜನ್ ಚಾಲಿತ ಭಾರೀ ಟ್ರಕ್ ತಯಾರಿಸಿದ್ದು, ಅದರ ಪರೀಕ್ಷೆಗಳನ್ನು ಆರಂಭಿಸಿದೆ. ಈ ಪ್ರಯೋಗಗಳು 24 ತಿಂಗಳ ತನಕ ನಡೆಯಲಿದೆ. ವಿವಿಧ ಸಂರಚನೆಗಳು ಮತ್ತು ಪೇಲೋಡ್ ಸಾಮರ್ಥ್ಯಗಳೊಂದಿಗೆ 16 ವಾಹನಗಳನ್ನು ಒಳಗೊಂಡಿರುತ್ತದೆ. ಹೊಸ ಹೈಡ್ರೋಜನ್ ಆಂತರಿಕ ದಹನಕಾರಿ ಎಂಜಿನ್ ಮತ್ತು ಇಂಧನಕೋಶ ತಂತ್ರಜ್ಞಾನಗಳನ್ನು ಹೊಂದಿರಲಿದೆ. ಈ ಟ್ರಕ್‌ಗಳನ್ನು ಮುಂಬೈ, ಪುಣೆ, ದೆಹಲಿ, ಸೂರತ್, ವಡೋದರಾ, ಜಮ್ಶೆಡ್‌ಪುರ, ಕಳಿಂಗನಗರ ಸೇರಿದಂತೆ ಭಾರತದ ಪ್ರಮುಖ ಸರಕು ಮಾರ್ಗಗಳಲ್ಲಿ ಪರೀಕ್ಷಿಸಲಾಗುತ್ತದೆ. ಈ ಟ್ರಕ್ 300–500 ಕಿ.ಮೀ. ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲಿದೆ.




## 2047ಕ್ಕೆ ಶೇ.70ಕ್ಕೆ ಏರಲಿದೆ ಮಹಿಳಾ ನೌಕರರ ಸಂಖ್ಯೆ.

2047ರ ಹೊತ್ತಿಗೆ ದೇಶವನ್ನು 'ವಿಕಸಿತ ಭಾರತ'ವನ್ನಾಗಿಸುವುದಕ್ಕೆ ಕೇಂದ್ರ ಸರ್ಕಾರ ಬದ್ಧವಾಗಿದ್ದು, ಆ ವೇಳೆಗೆ ದೇಶದ ಒಟ್ಟಾರೆ ಉದ್ಯೋಗಿಗಳಲ್ಲಿ ಶೇ. 70ರಷ್ಟು ಮಹಿಳಾ ಉದ್ಯೋಗಿಗಳು ಇರಲಿದ್ದಾರೆ ಎಂದು ಕಾರ್ಮಿಕ ಕಾರ್ಯದರ್ಶಿ ಸುಮಿತ್ರಾ ದಾವಾ ಹೇಳಿದ್ದಾರೆ. ಸೇವಾ ವಲಯದಲ್ಲಿ ಮಹಿಳೆಯರು ಎಂಬ ವಿಷಯವಾಗಿ ಕಾನ್ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ (ಸಿಐಐ) ಆಯೋಜಿಸಿದ್ದ ಸಮಾವೇಶದಲ್ಲಿ ಮಾತನಾಡಿದ ಅವರು, ಮಹಿಳೆಯರು ಕಾರ್ಯನಿರ್ವಹಿಸಲು ಸಾಧ್ಯವಿರುವ ಇನ್ನೂ ಹಲವಾರು ವಲಯಗಳು ಇವೆ. ಆ ಕೆಲಸಕ್ಕೆ ಮಹಿಳೆಯರನ್ನು ಸಜ್ಜುಗೊಳಿಸಬೇಕಾಗಿದೆ. ಅವರು ಸ್ಥಾಪಿಸುವ ಉದ್ಯಮಗಳಿಗೆ ಬಂಡವಾಳದ ಬೆಂಬಲ ನೀಡಬೇಕಾಗಿದೆ ಎಂದು ಹೇಳಿದರು.

# ಸಾಲುದ್ದದ ಸುದ್ದಿಗಳು

## ಶೀಘ್ರವೇ ಜಾನುವಾರುಗಳಿಗೂ ಜನರಿಕ್ ಮೆಡಿಸಿನ್

ಉನ್ನತ ಗುಣಮಟ್ಟದ ಮತ್ತು ಕೈಗೆಟುಕುವ ಬೆಲೆಯಲ್ಲಿ ಜನರಿಕ್ ಪಶು ವೈದ್ಯಕೀಯ ಔಷಧಗಳನ್ನು ಪೂರೈಸುವ ಸಲುವಾಗಿ 3880 ಕೋಟಿ ರೂ. ವೆಚ್ಚದ ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ (ಎಲ್‌ಎಚ್‌ಡಿಸಿಪಿ) ಬದಲಾವಣೆ ತರಲು ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. 2024–25 ಮತ್ತು 2025–26ನೇ ಸಾಲಿನ ಎಲ್‌ಎಚ್ ಡಿಸಿಪಿ ಕಾರ್ಯಕ್ರಮಕ್ಕಾಗಿ 3880 ಕೋಟಿ ರೂ. ಮೀಸಲಿಡಲಾಗಿದೆ. ಈ ಕಾರ್ಯಕ್ರಮದಲ್ಲಿ ಪಶು ಔಷಧ ಘಟಕ ಸೇರಿಸಲಾಗಿದ್ದು ಉನ್ನತ ಗುಣಮಟ್ಟದ ಔಷಧಗಳನ್ನು ಪೂರೈಸಲಾಗುವುದು. ಇದಕ್ಕಾಗಿ 75 ಕೋಟಿ ರೂ. ಮೀಸಲಿಟ್ಟಿದ್ದು, ಜನೌಷಧಿ ಯೋಜನೆಯಂತೆ ಪಶುಔಷಧಿ ಘಟಕ ಕಾರ್ಯನಿರ್ವಹಿಸಲಿದೆ. ಪ್ರಧಾನಮಂತ್ರಿ ಕಿಸಾನ್ ಸಮೃದ್ಧಿ ಕೇಂದ್ರಗಳು, ಸಹಕಾರ ಸಂಘಗಳು ಜನರಿಕ್  ಔಷಧಗಳನ್ನು ಪೂರೈಸಲಾಗುವುದು. ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದಡಿ ಕಾಲು–ಬಾಯಿ ರೋಗ, ಬ್ರೂಸೆಲೋಸಿಸ್ ಸೇರಿ ಹಲವು ರೋಗಗಳ ನಿಯಂತ್ರಣಕ್ಕೆ ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತದೆ. ಪ್ರಸ್ತುತ ದೇಶದಲ್ಲಿ 9 ರಾಜ್ಯಗಳು ಕಾಲು–ಬಾಯಿ ರೋಗ ಮುಕ್ತವಾಗುವ ಹಂತದಲ್ಲಿವೆ. ಕರ್ನಾಟಕ, ಪಂಜಾಬ್, ಹರಿಯಾಣ, ಉತ್ತರಾಖಂಡ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ಈ ರೋಗ ಬಹುತೇಕ ನಿಯಂತ್ರಣಕ್ಕೆ ಬಂದಿದೆ.

## ಭಾರತದಲ್ಲಿದ್ದಾರೆ 191 ಶತಕೋಟ್ಯಧಿಪತಿಗಳು

10 ಮಿಲಿಯನ್ ಡಾಲರ್‌ಗಿಂತ ಹೆಚ್ಚಿನ ಆಸ್ತಿಯನ್ನು ಹೊಂದಿರುವ ಭಾರತೀಯ ಹೆಚ್ಚಿನ ನಿವ್ವಳ ಮೌಲ್ಯದ ವ್ಯಕ್ತಿಗಳ ಸಂಖ್ಯೆ (ಎಚ್‌ಎನ್‌ಡಬ್ಲ್ಯುಐ) ಕಳೆದ ವರ್ಷ ಶೇ.6ರಷ್ಟು ಏರಿಕೆಯಾಗಿ 85,698ಕ್ಕೆ ತಲುಪಿದೆ ಎಂದು ನೈಟ್ ಫ್ರಾಂಕ್ ತಿಳಿಸಿದೆ. ಜಾಗತಿಕ ಆಸ್ತಿ ಸಲಹೆಗಾರ ನೈಟ್ ಫ್ರಾಂಕ್ ತನ್ನ ದಿ ವೆಲ್ತ್ ರಿಪೋರ್ಟ್ 2025 ಅನ್ನು ಬಿಡುಗಡೆ ಮಾಡಿದ್ದು, ಇದು 2024ರಲ್ಲಿ ಭಾರತದಲ್ಲಿ ಎಚ್‌ಎನ್‌ಡಬ್ಲ್ಯುಐ ಜನಸಂಖ್ಯೆ 85,698 ಎಂದು ಅಂದಾಜಿಸಿದೆ. 2028ರ ವೇಳೆಗೆ ಈ ಸಂಖ್ಯೆ 93,753 ಕ್ಕೆ ಏರುವ ನಿರೀಕ್ಷೆಯಿದೆ. ಇದು ಭಾರತದ ವಿಸ್ತರಿಸುತ್ತಿರುವ ಸಂಪತ್ತಿನ ಭೂದೃಶ್ಯವನ್ನು ಪ್ರತಿಬಿಂಬಿಸುತ್ತದೆ ಎಂದು ಸಲಹೆಗಾರ ಹೇಳಿದರು. ಎಚ್.ಎನ್ ಡಬ್ಲ್ಯೂಐ ಜನಸಂಖ್ಯೆಯ ಹೆಚ್ಚುತ್ತಿರುವ ಪ್ರವೃತ್ತಿಯು ದೇಶದ ಬಲವಾದ ದೀರ್ಘಕಾಲೀನ ಆರ್ಥಿಕ ಬೆಳವಣಿಗೆ, ಹೆಚ್ಚುತ್ತಿರುವ ಹೂಡಿಕೆ ಅವಕಾಶಗಳು ಮತ್ತು ಐಷಾರಾಮಿ ಮಾರುಕಟ್ಟೆಯ ವಿಕಸನವನ್ನು ಎತ್ತಿ ತೋರಿಸುತ್ತದೆ. ಜಾಗತಿಕ ಸಂಪತ್ತಿನ ಸೃಷ್ಟಿಯಲ್ಲಿ ಭಾರತವನ್ನು ಪ್ರಮುಖ ದೇಶವನ್ನಾಗಿ ಮಾಡುತ್ತದೆ.

## ಕಳೆದ 10 ವರ್ಷಗಳಲ್ಲಿ ಜನರ ಆರೋಗ್ಯ ವೆಚ್ಚ ಶೇ.64 ರಿಂದ ಶೇ.39 ಕ್ಕೆ ಇಳಿದಿದೆ: ನಡ್ಡಾ

ನವದೆಹಲಿಯಲ್ಲಿ ನಡೆದ 12ನೇ ಅಂತರರಾಷ್ಟ್ರೀಯ ಆರೋಗ್ಯ ಸಂವಾದ 2025ರ ಆವೃತ್ತಿಯನ್ನುದ್ದೇಶಿಸಿ ಮಾತನಾಡಿದ ನಡ್ಡಾ, ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ, ರಾಷ್ಟ್ರೀಯ ಆರೋಗ್ಯ ಮಿಷನ್ ಮತ್ತು ಇತರ ಯೋಜನೆಗಳ ಅಡಿಯಲ್ಲಿ ಒದಗಿಸಲಾದ ಸೇವೆಗಳೊಂದಿಗೆ ಜನರ ಜೇಬಿನಿಂದ ಆರೋಗ್ಯ ವೆಚ್ಚ ಕಡಿಮೆಯಾಗಲು ಕಾರಣವಾಗಿದೆ ಎಂದು ಹೇಳಿದರು. ಸಾರ್ವತ್ರಿಕ ಆರೋಗ್ಯ ವ್ಯಾಪ್ತಿಯನ್ನು ಸಾಧಿಸಲು ಆಯುಷ್ಮಾನ್ ಭಾರತ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯನ್ನು 2018ರಲ್ಲಿ ಪ್ರಾರಂಭಿಸಲಾಯಿತು. ದೇಶದ ಜನಸಂಖ್ಯೆಯ ಸುಮಾರು ಶೇ.40 ರಷ್ಟು ಜನರು ಈ ಯೋಜನೆಯ ವ್ಯಾಪ್ತಿಗೆ ಬರುತ್ತಿದ್ದಾರೆ. ಇತ್ತೀಚೆಗೆ, ಸಾಮಾಜಿಕ–ಆರ್ಥಿಕ ಸ್ಥಿತಿಯನ್ನು ಲೆಕ್ಕಿಸದೆ 70 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಎಲ್ಲಾ ಹಿರಿಯ ನಾಗರಿಕರನ್ನು ಈ ಯೋಜನೆಯಲ್ಲಿ ಸೇರಿಸಲಾಗಿದೆ ಎಂದರು.


# 'ಅನುತ್ತಮ' ಚಾಕೊಲೇಟ್ಸ್ ಮೂಲಕ ಸ್ವಾವಲಂಬಿ ಬದುಕಿಗೆ ಮುಂದಡಿ ಇಟ್ಟ ದಂಪತಿ

ಪ್ರೇರಣಾ

ಸೃಜನಾತ್ಮಕ ಆವಿಷ್ಕಾರಗಳು ಹೊರಹೊಮ್ಮುವುದು ಅನಿವಾರ್ಯತೆಯಿಂದ ಎಂಬ ಪ್ರಾಜ್ಞರ ನುಡಿಯನ್ನು ನಾವು ಕೇಳಿದ್ದೇವೆ. ಅದರಂತೆ ಜಗತ್ತನ್ನು ಬಾಧಿಸಿದ ಕೊರೋನಾ ಕಾಲಘಟ್ಟವೂ ಅಂತಹ ಅಸಂಖ್ಯಾತ ಮಂದಿಯಲ್ಲಿ ಅನಿವಾರ್ಯತೆಯನ್ನು ಸೃಷ್ಟಿಸಿ, ವಿವಿಧ ರೀತಿಯ ಸೃಜನಾತ್ಮಕ ಜೀವನೋಪಾಯದ ಮಾರ್ಗವನ್ನು ನಿರ್ಮಿಸಿಕೊಳ್ಳಲು ಸಹಕಾರಿಯಾಯಿತು. ಕೊರೋನಾದಂತಹ ಕ್ಲಿಷ್ಟಕರ ಸಂದರ್ಭದಲ್ಲಿ ಭಾರತ ಒಂದು ರಾಷ್ಟ್ರವಾಗಿ ಲಸಿಕೆ, ಪಿಪಿಇ ಕಿಟ್, ಮಾಸ್ಕ್, ವೆಂಟಿಲೇಟರ್ ನಂತಹ ಸಾರ್ವಕಾಲಿಕವಾಗಿ ಅಗತ್ಯವಾಗಿ ಬೇಕಾದ ಅನಿವಾರ್ಯ ವಸ್ತುಗಳ ನಿರ್ಮಾಣವನ್ನು ಯಥೇಚ್ಛವಾಗಿ ಮಾಡತೊಡಗಿತು. ಅನೇಕ ದೊಡ್ಡ ಉದ್ಯಮಗಳು ಈ ನಿಟ್ಟಿನಲ್ಲಿ ರೂಪುಪಡೆದವು. ಅವುಗಳ ಜೊತೆಜೊತೆಗೆ ವೈಯಕ್ತಿಕವಾಗಿ ಅನೇಕ ಯುವಕರು ತಮ್ಮ ಸಾವಿರಾರು ರೂಪಾಯಿಯ ಸಂಬಳವನ್ನು ನೀಡುತ್ತಿದ್ದ ನಗರದ ಉದ್ಯೋಗವನ್ನು ಬಿಟ್ಟು, ಮರಳಿ ತಮ್ಮ ಹಳ್ಳಿಗಳಿಗೆ ಹಿಂದಿರುಗಿ ವಿನೂತನ ಕಲ್ಪನೆಯ ಸ್ವಯಂ ಉದ್ಯೋಗವನ್ನು ಪ್ರಾರಂಭಿಸಿದರು. ಈ ಸಂದರ್ಭದಲ್ಲೇ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ದಂಪತಿ ಆರಂಭಿಸಿದ ಒಂದು ವಿಶಿಷ್ಟ ಉದ್ಯಮ 'ಅನುತ್ತಮ' ಚಾಕೊಲೇಟ್ಸ್.

ಕೋವಿಡ್ ಸಂದರ್ಭದಲ್ಲಿ ಬಾಲಸುಬ್ರಹ್ಮಣ್ಯ ಹಾಗೂ ಸ್ವಾತಿ ದಂಪತಿಗಳು ಐಟಿ ಉದ್ಯಮವನ್ನು ಬಿಟ್ಟು ಬಂದು ಪುತ್ತೂರಿನ ಆರ್ಲಪದವು ಎಂಬ ಗ್ರಾಮೀಣ ಪ್ರದೇಶದಲ್ಲಿ ತಮ್ಮ ಮನೆಯಲ್ಲೇ 'ಅನುತ್ತಮ' ಎನ್ನುವ ಹೆಸರಿನ ಚಾಕೊಲೇಟ್ ಉದ್ಯಮವನ್ನು ಪ್ರಾರಂಭಿಸಿದರು. ಅನುತ್ತಮ ಎಂದರೆ 'ಉನ್ನತವಾದದ್ದು', 'ಶ್ರೇಷ್ಠವಾದದ್ದು' ಎಂಬ ಅರ್ಥವಿದೆ. ಈ ಶ್ರೇಷ್ಠವಾದ ಉತ್ಪನ್ನವನ್ನು ತಯಾರಿಸಲು ಅವರು ತಮ್ಮದೇಯಾದ ಕೋಕೋ ತೋಟ ಹಾಗೂ ಅವರ ಮನೆಯ ಹತ್ತಿರವೇ ಇರುವ ಇನ್ನಿತರ ತೋಟದವರ ಸಹಯೋಗವನ್ನು ಪಡೆದರು. ತಮ್ಮ ಉದ್ಯಮವನ್ನು ಪ್ರಾರಂಭಿಸುವುದರೊಂದಿಗೆ ಅಲ್ಲಿನ ಸ್ಥಳೀಯರಿಗೂ ಉದ್ಯೋಗ ನೀಡುವ ಮೂಲಕ ಗ್ರಾಮೀಣಭಾಗದಲ್ಲಿ ಉದ್ಯೋಗಸೃಷ್ಟಿಗೂ ಕಾರಣೀಭೂತರಾದರು. ಇಂದು ಯಶಸ್ವಿಯಾಗಿ ತಮ್ಮ ಉದ್ಯಮವನ್ನು ನಡೆಸುತ್ತಿದ್ದಾರೆ.

ಇವರು ತಯಾರಿಸಿದ ಚಾಕೊಲೇಟ್ ಎಲ್ಲರಿಗೂ ಇಷ್ಟವಾಗುತ್ತ ನಿಧಾನವಾಗಿ ಚಾಕೊಲೇಟ್‌ಗೆ ಬೇಡಿಕೆ ಹೆಚ್ಚಾಯಿತು. ತಮ್ಮ






"ನಾವು ಊರಿನಲ್ಲಿ ಆರೋಗ್ಯಕರವಾದ ಉತ್ತಮ ಗುಣಮಟ್ಟದ ನೈಸರ್ಗಿಕವಾಗಿ ಬೆಲ್ಲದಿಂದ ತಯಾರಿಸುವ ಅನುತ್ತಮ ಚಾಕೋಲೆಟ್ ಮೂಲಕ ಇಲ್ಲಿನ ರೈತರಿಗೆ, ಸ್ಥಳೀಯರಿಗೆ ಸಹಾಯ ಮಾಡುತ್ತಿರುವುದು ನಮಗೆ ಸಂತೋಷ ತಂದಿದೆ. ಜನರಿಂದ ಸಾಕಷ್ಟು ಬೇಡಿಕೆ ಇದೆ ಮುಂದಿನ ದಿನಗಳಲ್ಲಿ ಈ ಉದ್ಯಮವನ್ನು ದೊಡ್ಡ ಮಟ್ಟದಲ್ಲಿ ಬೆಳೆಸುವ ಯೋಚನೆ ಇದೆ" ಬಾಲಸುಬ್ರಹ್ಮಣ್ಯ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಚಾಕೊಲೇಟ್‌ಅನ್ನು ಸಾಮಾಜಿಕ ಜಾಲತಾಣದ ಮೂಲಕ ಮಾರಾಟ ಮಾಡಲು ಆರಂಭಿಸಿದರು. ಸಾಕಷ್ಟು ಪ್ರಮಾಣದಲ್ಲಿ ಮಾರಾಟವಾಯಿತು. ನಂತರ ದಂಪತಿಗಳು ಇಬ್ಬರು ಐಟಿ ಉದ್ಯೋಗವನ್ನು ಬಿಟ್ಟು ಊರಿನಲ್ಲಿ ನೆಲೆಸಿ ಊರಿನ ಅನೇಕರಿಗೆ ಉದ್ಯೋಗ ನೀಡಿ ತಮ್ಮ ಮನೆಯ ಮೇಲೆಯೇ ಚಾಕೊಲೇಟ್ ತಯಾರಿಸುವ, ಘಟಕ ನಿರ್ಮಿಸಿ ಇಂದು ಹಲವು ರಾಜ್ಯಗಳಿಗೆ, ವಿದೇಶಗಳಿಗೆ ರಫ್ತು ಮಾಡುತ್ತಿದ್ದು, ಜನರಿಂದ ಉತ್ತಮ ಬೇಡಿಕೆ ಪಡೆದಿದೆ. ಊರಿನ ಕೃಷಿಕರಿಗೂ ಸಹಾಯವಾಗಲೂ ಅವರಿಂದ ಕೋಕೋವನ್ನು ಖರೀದಿಸುತ್ತಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ತಯಾರಾಗುವ ಅನುತ್ತಮ ಚಾಕೊಲೇಟ್‌ನ ಸಿಹಿಯ ಹಿಂದಿನ ಕಾರಣವೂ ಬೇರೆಯದೇ ಆಗಿದೆ. ಬೆಲ್ಲ, ಖರ್ಜೂರ ಹಾಗೂ ತೆಂಗಿನ ಸಕ್ಕರೆಯನ್ನು ಚಾಕೋಲೇಟ್‌ಗೆ ಸಿಹಿಯನ್ನು ನೀಡಲಾಗುತ್ತದೆ. ಯಾವುದೇ ರೀತಿಯ ರಸಾಯನಿಕಗಳನ್ನು ಬಳಸಲಾಗುವುದಿಲ್ಲ. ನೈಸರ್ಗಿಕ ಉತ್ಪನ್ನಗಳನ್ನೇ ಬಳಸಿಕೊಂಡು ತಯಾರಾಗುತ್ತಿರುವ ಅನುತ್ತಮ ಚಾಕೊಲೇಟ್ಸ್ ಇಂದು ದೇಶ ವಿದೇಶಗಳಿಗೆ ತಲುಪುತ್ತಿದೆ ಎಂಬುದು ಹೆಮ್ಮೆಯ ವಿಚಾರ. ಅಲ್ಲಿಗೆ ಗ್ರಾಮವೊಂದರಲ್ಲಿ ಪ್ರಾರಂಭವಾದ ಉದ್ಯಮವೊಂದು ವಿದೇಶಗಳಲ್ಲೂ ತಮ್ಮ ಉತ್ಪನ್ನವನ್ನು ಮಾರಾಟ ಮಾಡುವ ಮೂಲಕ ಯಶಸ್ವಿಯಾಯಿತು.

ಅನುತ್ತಮ ಆರ್ಟಿಸಾನಲ್ ಚಾಕೊಲೇಟ್‌ಗಳು ಸುಸ್ಥಿರತೆ ಮತ್ತು ನೈತಿಕವಾಗಿ ಬದ್ಧವಾಗಿದ್ದು ಅವರ ಚಾಕೋಲೇಟ್ ನಿರ್ಮಾಣದ ಪ್ರಕ್ರಿಯೆಯ ಪ್ರತಿಯೊಂದು ಅಂಶವು ಪರಿಸರವನ್ನು ಗೌರವಿಸುತ್ತದೆ ಮತ್ತು ಕೋಕೋ ಕೃಷಿಯಲ್ಲಿ ತೊಡಗಿರುವ ಸಮುದಾಯಗಳನ್ನು ಬೆಂಬಲಿಸುತ್ತದೆ. ಅನುತ್ತಮ ಚಾಕೋಲೇಟ್ ಅಂತರರಾಷ್ಟ್ರೀಯ ವೇದಿಕೆಯಲ್ಲಿ ಗುರುತಿಸಲ್ಪಟ್ಟ ಸುವಾಸನೆಭರಿತ ಉತ್ಪನ್ನ, ಈ ರಾಷ್ಟ್ರದ ಹೆಮ್ಮೆಯಾಗಿ ನಿಮ್ಮ ಆನಂದ ಭಾಗವಾಗಲಿದೆ ಎಂಬ ದೊಡ್ಡ ಉದ್ದೇಶವನ್ನು ಒಳಗೊಂಡಿದೆ ಎಂದು ಸಂಸ್ಥೆಯ ಸಂಸ್ಥಾಪಕರು ತಿಳಿಸುತ್ತಾರೆ.

ವೋಕಲ್ ಫಾರ್ ಲೋಕಲ್, ಯುವಕರು ಉದ್ಯೋಗದಾತರಾಗಬೇಕು ಎಂಬ ಅಪೇಕ್ಷೆ ಸಮಾಜದಲ್ಲಿ ಮೂಡುತ್ತಿರುವ ಸಂದರ್ಭದಲ್ಲೇ ನಮ್ಮ ಸುತ್ತಮುತ್ತಲಿನ ಅವಕಾಶಗಳನ್ನೇ ಬಳಸಿಕೊಂಡು ಯಶಸ್ವಿಯಾಗುತ್ತಿರುವ ಇಂತಹ ಪ್ರಯತ್ನಗಳು ನಿಜಕ್ಕೂ ಆದರ್ಶ. ಸ್ವಾವಲಂಬಿಯಾಗಿ ಬೆಳೆಯಬೇಕೆನ್ನುವ ಯೋಚನೆಯಲ್ಲಿರುವ ಯುವಕರಿಗೆ ಹೊಸ ಅವಕಾಶಗಳತ್ತ ಯೋಚಿಸುವಂತೆ ಮಾಡುವ ಉತ್ತಮ ಮಾದರಿ. ಹೆಚ್ಚೆಚ್ಚು ಸ್ವಾವಲಂಬಿ ಉದ್ಯಮಗಳು ಪ್ರಾರಂಭವಾದಷ್ಟು ರಾಷ್ಟ್ರವೂ ಆರ್ಥಿಕವಾಗಿ ಸಮರ್ಥವಾಗುತ್ತಾ ಹೋಗುತ್ತದೆ ಹಾಗೂ ಯುವಕರು ಸದೃಢರಾಗುತ್ತಾರೆ ಎನ್ನುವುದರಲ್ಲಿ ಸಂಶಯವಿಲ್ಲ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th MARCH 2025
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-03-2025



## ಪುಂಗವ ಪತ್ರಿಕೆಯ ಪ್ರಾರೂಪ
(ಪ್ರಾರೂಪ-8, ವಿಧಿ – 8)

| | | |
|---|---|---|
| ಪ್ರಕಟಣೆಯ ಸ್ಥಳ | : | #74, ರಂಗರಾವ್ ರಸ್ತೆ, ಶಂಕರಪುರಂ ಬೆಂಗಳೂರು-560004 |
| ಪ್ರಕಾಶಕ | : | **ಕಾ. ಶ್ರೀ. ನಾಗರಾಜ** # 74, ರಂಗರಾವ್ ರಸ್ತೆ, ಬೆಂಗಳೂರು-560004 |
| ಮಾಲೀಕತ್ವ | : | **ಕಾ. ಶ್ರೀ. ನಾಗರಾಜ** # 74, ರಂಗರಾವ್ ರಸ್ತೆ, ಬೆಂಗಳೂರು-560004 |
| ಸಂಪಾದಕ | : | **ಕಾ. ಶ್ರೀ. ನಾಗರಾಜ** # 74, ರಂಗರಾವ್ ರಸ್ತೆ, ಬೆಂಗಳೂರು-560004 |
| ಭಾರತದ ಪ್ರಜೆಯೇ: | | ಹೌದು |
| ಮುದ್ರಕ | : | **ರಾಷ್ಟ್ರೋತ್ಥಾನ ಮುದ್ರಣಾಲಯ** ಕೆಂಪೇಗೌಡನಗರ, ಬೆಂಗಳೂರು-560019 |

ಮೇಲೆ ನೀಡಿರುವ ಎಲ್ಲ ಮಾಹಿತಿಗಳೂ ಪೂರ್ಣ ಸತ್ಯವೆಂದು ನಾನು **ಕಾ. ಶ್ರೀ. ನಾಗರಾಜ,** (#74, ರಂಗರಾವ್ ರಸ್ತೆ, ಬೆಂಗಳೂರು – 560004) ಘೋಷಿಸುತ್ತೇನೆ.

ಸಹಿ
**ಕಾ. ಶ್ರೀ. ನಾಗರಾಜ**
(ಪ್ರಕಾಶಕ)

ಬೆಂಗಳೂರು
25.03.2025

## ಭಗವದ್ಗೀತೆ ಹಿಡಿದು ಪ್ರಮಾಣ ವಚನ ಸ್ವೀಕರಿಸಿದ ಅಮೇರಿಕಾದ ನೂತನ FBI ನಿರ್ದೇಶಕ ಕಾಶ್ ಪಟೇಲ್

ಭಾರತೀಯ ಮೂಲದ ಕಾಶ್ ಪಟೇಲ್ ಅವರು ಅಮೇರಿಕಾದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ (ಎಫ್‌ಬಿಐ) ನ ಒಂಬತ್ತನೇ ನಿರ್ದೇಶಕರಾಗಿ ಭಗವದ್ಗೀತೆಯ ಮೇಲೆ ಕೈಯಿಟ್ಟು ಪ್ರಮಾಣ ವಚನ ಸ್ವೀಕರಿಸಿದರು. ಪ್ರಮಾಣ ವಚನ ಸಮಾರಂಭವನ್ನು ಯುಎಸ್ ಅಟಾರ್ನಿ ಜನರಲ್ ಪ್ಯಾಮ್ ಬೋಂಡಿ ಬೋಧಿಸಿದರು. ಪಟೇಲ್ ಅವರು ಒಂಬತ್ತನೇ ಎಫ್‌ಬಿಐ ನಿರ್ದೇಶಕರಾಗಿ ಕ್ರಿಸ್ಟೋಫರ್ ವ್ರೇ ಅವರ ನಂತರ ನೇಮಕಗೊಂಡಿದ್ದಾರೆ. ಕಾಶ್ ಪಟೇಲ್ ತಮ್ಮ



ಹರ್ಷ ವ್ಯಕ್ತಪಡಿಸುತ್ತಾ, ತಾವು ಅಮೆರಿಕದ ಕನಸನ್ನು ಬದುಕುತ್ತಿದ್ದೇನೆ ಮತ್ತು ಅದು ಇನ್ನೂ ಜೀವಂತವಾಗಿದೆ ಎಂದು ಹೇಳಿದರು. ಅವರು ಈ ಅವಕಾಶವನ್ನು "ತಮ್ಮ ಜೀವನದ ಅತ್ಯಂತ ದೊಡ್ಡ ಗೌರವ" ಎಂದು ಕರೆದರು ಮತ್ತು "ಮೊದಲ ತಲೆಮಾರಿನ ಭಾರತೀಯ ಭೂಮಿಯ ಮೇಲಿನ ಶ್ರೇಷ್ಠ ರಾಷ್ಟ್ರದ ಕಾನೂನು ಜಾರಿ ಸಂಸ್ಥೆಯನ್ನು ಮುನ್ನಡೆಸಲಿದ್ದೇನೆ" ಎಂದು ಹೇಳಿದರು.

## 2025ರ ಮಾರ್ಚ್ 21, 22, 23ರಂದು ಆರೆಸ್ಸೆಸ್ ಅಖಿಲ ಭಾರತೀಯ ಪ್ರತಿನಿಧಿ ಸಭಾ

**ಬೆಂಗಳೂರು ಮಾರ್ಚ್ 05, 2025:** ರಾಷ್ಟ್ರೀಯ ಸ್ವಯಂಸೇವಕ ಸಂಘದ ನೀತಿ-ನಿರ್ಧಾರಗಳನ್ನು ನಿರೂಪಿಸುವ ಮಹತ್ವದ ಸಭೆ ಅಖಿಲ ಭಾರತೀಯ ಪ್ರತಿನಿಧಿ ಸಭಾ ಇದೇ 2025ರ ಮಾರ್ಚ್ 21, 22, 23ರಂದು ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದ ಪರಿಸರದಲ್ಲಿ ನಡೆಯಲಿದೆ.

ಬೈಠಕ್‌ನಲ್ಲಿ ಹಿಂದಿನ ವರ್ಷ 2024-25ರ ಕಾರ್ಯಚಟುವಟಿಕೆಗಳ ಕುರಿತು ವಿಮರ್ಶಾತ್ಮಕ ಚರ್ಚೆಯ ಜೊತೆಗೆ ವಿಶೇಷ ಕಾರ್ಯಗಳ ಪ್ರಸ್ತುತಿಯೂ ಆಗಲಿದೆ. ಮುಂದಿನ ವಿಜಯದಶಮಿ (ದಸರಾ) 2025ಕ್ಕೆ ಸಂಘಕಾರ್ಯಕ್ಕೆ ನೂರು ವರ್ಷ ಪೂರ್ಣಗೊಳ್ಳಲಿದೆ. ಇದರ ನಿಮಿತ್ತ 2025ರ ವಿಜಯದಶಮಿಯಿಂದ 2026ರ ವಿಜಯದಶಮಿಯವರೆಗೆ ಸಂಘ ಶತಾಬ್ದಿಯ ವರ್ಷ ಎಂದು ಕರೆಯಲಾಗುತ್ತದೆ.

ಸಭೆಯಲ್ಲಿ ಶತಾಬ್ದಿ ವರ್ಷದ ಕಾರ್ಯವಿಸ್ತಾರದ ಯೋಜನೆಯ ಜೊತೆ ಜೊತೆಗೆ ಮುಂಬರುವ ಶತಾಬ್ದಿ ವರ್ಷದ ಪ್ರಯುಕ್ತ ವಿಭಿನ್ನ ಕಾರ್ಯಕ್ರಮಗಳ ಆಯೋಜನೆ ಹಾಗೂ ಅಭಿಯಾನಗಳ ರೂಪುರೇಷೆಯ ತಯಾರಿ ನಡೆಯಲಿದೆ. ಹಾಗೆಯೇ ಬೈಠಕ್‌ನಲ್ಲಿ ರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿದ ಎರಡು ಪ್ರಸ್ತಾವನೆಯ ಕುರಿತು ವಿಚಾರ ವಿನಿಮಯಗೊಳ್ಳಲಿದೆ. ಜೊತೆಯಲ್ಲಿ ಸಂಘದ ಶಾಖೆಯ ಮೂಲಕ ಅಪೇಕ್ಷಿತ ಸಾಮಾಜಿಕ ಪರಿವರ್ತನೆಯ ಕಾರ್ಯಗಳ ಸಹಿತ ವಿಶೇಷವಾಗಿ ಪಂಚಪರಿವರ್ತನೆಗಾಗಿ ನಡೆದ ಪ್ರಯತ್ನಗಳ ಕುರಿತು ಚರ್ಚೆ ನಡೆಯಲಿದೆ. ಹಿಂದುತ್ವ ಜಾಗರಣ ಸಹಿತ ದೇಶದ ವರ್ತಮಾನದ ಸ್ಥಿತಿಗತಿಯ ಕುರಿತು ವಿಶ್ಲೇಷಣೆ ಹಾಗೂ ಮಾಡಬೇಕಾದ ಕಾರ್ಯದ ಕುರಿತೂ ಸಭೆಯಲ್ಲಿ ಚರ್ಚಿಸಲಾಗುತ್ತದೆ.




ಸಭೆಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಎಲ್ಲಾ ಸಹಸರಕಾರ್ಯವಾಹರುಗಳು, ಅನ್ಯ ಪದಾಧಿಕಾರಿಗಳ ಸಹಿತ ಕಾರ್ಯಕಾರಿಣಿಯ ಸದಸ್ಯರು ಉಪಸ್ಥಿತರಿರಲಿದ್ದಾರೆ. ಪ್ರಮುಖವಾಗಿ ಬೈಠಕ್‌ಗೆ ಕ್ಷೇತ್ರೀಯ ಹಾಗೂ ಪ್ರಾಂತ ಸ್ತರದ 1480 ಆಹ್ವಾನಿತ ಪ್ರತಿನಿಧಿಗಳು ಅಪೇಕ್ಷಿತರಿದ್ದಾರೆ. ದೇಶಾದ್ಯಂತ ಹರಡಿಕೊಂಡಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆಗಳ ಮೂಲಕ ಆಯ್ಕೆಯಾದ ಪ್ರತಿನಿಧಿಗಳು ಮತ್ತು ವಿವಿಧ ಕ್ಷೇತ್ರದ 40ಕ್ಕೂ ಮಿಕ್ಕ ಸಂಘಟನೆಗಳ ರಾಷ್ಟ್ರೀಯ ಸ್ತರದ ಕಾರ್ಯಕರ್ತರು ಈ 3 ದಿನಗಳ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್ ತಿಳಿಸಿದ್ದಾರೆ.

## "ಆರ್‌ಎಸ್‌ಎಸ್ ನನ್ನಂತಹ ಲಕ್ಷಾಂತರ ಜನರನ್ನು ದೇಶಕ್ಕಾಗಿ ಬದುಕಲು ಪ್ರೇರೇಪಿಸಿದೆ": ಪ್ರಧಾನಿ ನರೇಂದ್ರ ಮೋದಿ



ಮೂರು ದಿನಗಳ 98ನೇ ಭಾರತೀಯ ಮರಾಠಿ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ "ಶಿವಾಜಿ ಮಹಾರಾಜರ ಪಟ್ಟಾಭಿಷೇಕವಾಗಿ 350 ವರ್ಷಗಳು ಪೂರ್ಣವಾಗಿದೆ. ಅಹಲ್ಯಾಬಾಯಿ ಹೋಳ್ಕರ್ ಅವರ ಜಯಂತಿಯ 300 ವರ್ಷವನ್ನು ಆಚರಿಸುತ್ತಿದ್ದೇವೆ. ಬಾಬಾ ಸಾಹೇಬ್ ಡಾ. ಅಂಬೇಡ್ಕರ್ ಅವರ ಶ್ರಮದಿಂದ ರಚನೆಯಾದ ಸಂವಿಧಾನ 75ರ ಸಂಭ್ರಮದಲ್ಲಿದೆ. ಈ ಸಂದರ್ಭದಲ್ಲಿ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲಾಗಿದೆ. ಹಾಗೆಯೇ ನಾವು ಹೆಮ್ಮೆ ಪಡುವಂತಹ ಇನ್ನೊಂದು ಸಂಗತಿ ಇದೆ. ಈ ನೆಲದ ಒಬ್ಬ ಮಹಾನ್ ಪುರುಷ ಕೇಶವ ಬಲಿರಾಮ್ ಹೆಡಗೇವಾರ್ 100 ವರ್ಷಗಳ ಹಿಂದೆ ಆರ್‌ಎಸ್‌ಎಸ್‌ನ ಬೀಜಗಳನ್ನು ಬಿತ್ತಿದ್ದರು. ಇಂದು, ಭವ್ಯ ವಟವೃಕ್ಷದಂತೆ, ಅದು ತನ್ನ ಶತಮಾನೋತ್ಸವವನ್ನು ಆಚರಿಸುತ್ತಿದೆ. ಕಳೆದ 100 ವರ್ಷಗಳಲ್ಲಿ ವೇದಗಳಿಂದ ವಿವೇಕಾನಂದರವರೆಗೆ, ಭಾರತದ ಶ್ರೇಷ್ಠ ಪರಂಪರೆ ಮತ್ತು ಸಂಸ್ಕೃತಿಯನ್ನು ಹೊಸ ಪೀಳಿಗೆಗೆ ಕೊಂಡೊಯ್ಯಲು ಸಂಸ್ಕಾರಯುತ ಯಜ್ಞವನ್ನು ನಡೆಸುತ್ತಿದೆ. ನನ್ನಂತಹ ಲಕ್ಷಾಂತರ ಜನರು ನಮ್ಮ ದೇಶಕ್ಕಾಗಿ ಬದುಕಲು ಆರ್‌ಎಸ್‌ಎಸ್‌ನಿಂದ ಪ್ರೇರಣೆ ಪಡೆದಿರುವುದು  ನನ್ನ ಸೌಭಾಗ್ಯ" ಎಂದು ಹೇಳಿದರು.

## ನೀರೊಳಗಿನ ವಸ್ತುಸಂಗ್ರಹಾಲಯ ಆಗುತ್ತಿದೆ INS ಗುಲ್ದಾರ್ ಹಡಗು

ಭಾರತೀಯ ನೌಕಾಪಡೆಯು ತನ್ನ ನಿಷ್ಕ್ರಿಯಗೊಂಡ ಲ್ಯಾಂಡಿಂಗ್ ಶಿಪ್ ಟ್ಯಾಂಕ್ INS ಗುಲ್ದಾರ್ ಅನ್ನು ಭಾರತದ ಮೊದಲ ನೀರೊಳಗಿನ ವಸ್ತುಸಂಗ್ರಹಾಲಯ ಮತ್ತು ಕೃತಕ ದಿಬ್ಬವಾಗಿ ಪರಿವರ್ತಿಸುವ ಸಲುವಾಗಿ ಮಹಾರಾಷ್ಟ್ರ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ (MTDC) ಹಸ್ತಾಂತರಿಸಲಾಗಿದೆ. ಪರಿವರ್ತಿಸುವ ಪ್ರಕ್ರಿಯೆಯ ವೇಳೆ ಸಂಭಾವ್ಯ ಮಾಲಿನ್ಯಕಾರಕಗಳು ಅಥವಾ ಅಪಾಯಕಾರಿ ವಸ್ತುಗಳನ್ನು ತೆಗೆದುಹಾಕಲು ಹಡಗನ್ನು ಸಂಪೂರ್ಣ ಶುಚಿಗೊಳಿಸಲಾಗುತ್ತದೆ, ಮಾರ್ಗಸೂಚಿಗಳ ಪ್ರಕಾರ ಪರಿಸರ ಅನುಮತಿಗಳನ್ನು ಇದು ಪಡೆದಿದೆ. ಹಡಗನ್ನು ನೀರೊಳಗಿನ ವಸ್ತುಸಂಗ್ರಹಾಲಯ ಮತ್ತು



ಕೃತಕ ದಿಬ್ಬವಾಗಿ ಪರಿವರ್ತಿಸುವ ಯೋಜನೆಯು ಸಮುದ್ರ ಸಂರಕ್ಷಣೆಯನ್ನು ಪ್ರದರ್ಶಿಸಲು, ಕರಾವಳಿ ಸಮುದಾಯಗಳಿಗೆ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿಸಲು ಮತ್ತು ನೀರೊಳಗಿನ ಪ್ರವಾಸೋದ್ಯಮದಲ್ಲಿ ಭಾರತದ ಸ್ಥಾನಮಾನವನ್ನು ಹೆಚ್ಚಿಸಲು ಗಮನಾರ್ಹ ಸಾಮರ್ಥ್ಯವನ್ನು ಹೊಂದಿದೆ. ಈ ಉಪಕ್ರಮವು ಭಾರತೀಯ ನೌಕಾಪಡೆಗೆ ಶಿಥಿಲಗೊಂಡ ಹಡಗು ಸ್ಥಳದಲ್ಲಿ ಡೈವಿಂಗ್ ತರಬೇತಿಗೆ ಅವಕಾಶಗಳನ್ನು ಒದಗಿಸುತ್ತದೆ, ಇದು ಭಾರತೀಯ ನೌಕಾಪಡೆ ಮತ್ತು MTDC ನಡುವಿನ ಸಹಯೋಗವನ್ನು ಮತ್ತಷ್ಟು ಹೆಚ್ಚಿಸುತ್ತದೆ. 1985ರಿಂದ ಸಕ್ರೀಯವಾಗಿದ್ದ ಈ ಹಡಗು ಜನವರಿ 12, 2024 ರಂದು ತನ್ನ ಸೇವೆಯನ್ನು ಸ್ಥಗಿತಗೊಳಿಸಿತ್ತು.

**ಓದುಗರೇ ಗಮನಿಸಿ**

**ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:**
**ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021**

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.